ಪ್ರೆಸ್‌ಕ್ಲಬ್ ಪ್ರಶಸ್ತಿ ಪ್ರಕಟ | ವಸಂತ ನಾಡಿಗೇರ್‌ಗೆ ಜೀವಮಾನದ ಸಾಧನೆ ಗೌರವ

# ಡಾ.ಸಿ.ಎನ್.ಮಂಜುನಾಥ್ 'ವರ್ಷದ ವ್ಯಕ್ತಿ'

**ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಪ್ರೆಸ್‌ಕ್ಲಬ್ ಕೊಡಮಾಡುವ 2015-16ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಗೆ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹಾಗೂ 'ವಿಜಯ ಕರ್ನಾಟಕ'ಪತ್ರಿಕೆಯ ಸುದ್ದಿ ಸಂಪಾದಕರಾದ ವಸಂತ ನಾಡಿಗೇರ್ ಸೇರಿದಂತೆ 12 ಮಂದಿ ಹಿರಿಯ ಪತ್ರಕರ್ತರನ್ನು ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ಡಾ.ಸಿ.ಎನ್. ಮಂಜುನಾಥ್

ಡಿ.31ರಂದು ಬೆಳಗ್ಗೆ 11ಗಂಟೆಗೆ ಕ್ಲಬ್ ಆವರಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ವಿಜೇತರನ್ನು ಸನ್ಮಾನಿಸಲಿದ್ದಾರೆ. ಹಿರಿಯ ಪತ್ರಕರ್ತರಾದ ಡಿ.ವಿ.ರಾಜಶೇಖರ್, ಬಿ.ಪಿ.ಮಲ್ಲಪ್ಪ, ಎಸ್.ಆರ್.ಆರಾಧ್ಯ, ಶಶಿಧರ್ ಭಟ್, ಕೆ.ಎಂ.ಶಿವರಾಜು, ಆರ್.ಟಿ.ವಿಠಲಮೂರ್ತಿ, ರುದ್ರಣ್ಣ ಹರ್ತಿಕೋಟೆ, ವಿ.ನಾಗರಾಜು, ಜಿ.ಎಂ.ಕುಮಾರ್, ಹಿರಿಯ ಛಾಯಾಗ್ರಾಹಕರಾದ ಮಹಮ್ಮದ್ ಅಸದ್ ಮತ್ತು ಕೇಶವ ವಿಟ್ಲ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಜೊತೆಗೆ ಹಿರಿಯ ಪತ್ರಕರ್ತೆಯರಾದ ನಹೀದಾ ಅತಾವುಲ್ಲಾ ಮತ್ತು ಕೆ.ಜೆ.ನಾಗಲಕ್ಷ್ಮೀಬಾಯಿ ಅವರಿಗೆ 'ಸಾಧಕಿ' ಪ್ರಶಸ್ತಿಯನ್ನು ಹಾಗೂ ಮಂಡ್ಯ ಜಿಲ್ಲೆಯ ಕಿರುಗಾವಲಿನ ಸಾವಯವ ಕೃಷಿ ತಜ್ಞ ಸೈಯದ್ ಘನಿ ಖಾನ್ ಅವರಿಗೆ 'ಕೃಷಿ ಸಾಧಕ'ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಪ್ರೆಸ್‌ಕ್ಲಬ್ ಅಧ್ಯಕ್ಷರಾದ ಆರ್.ಶ್ರೀಧರ್ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ಶಿವಪ್ರಕಾಶ್ ತಿಳಿಸಿದ್ದಾರೆ.

ವಿಜಯ ಕರ್ನಾಟಕ

ದಿ. 27-12-15

Page - 8.